ಸಾರ್ವಜನಿಕ ಶಿಕ್ಷಣ ಇಲಾಖೆ ಕರ್ನಾಟಕ ಸರ್ಕಾರ ಸರ್ವ ಶಿಕ್ಷಣ ಅಭಿಯಾನ

2011 ಜನವರಿ 15–31

# ಚಿಣ್ಣರ ಚೇತನ

ಓ ನನ್ನ ಚೇತನ ಆಗು ನೀ ಅನಿಕೇತನ

ಹಣ್ಣೆಂದುಕೊಂಡು ಸೂರ್ಯನಿಗೇ ಕೈ ಚಾಚಲು ಆಗಸಕ್ಕೆ ಜಿಗಿದ ಬಾಲಕ ಹನುಮಂತನ ಕತೆ ಗೊತ್ತಲ್ಲವೆ? ಅಂಥ ದೊಡ್ಡ ಗುರಿ, ಆತ್ಮವಿಶ್ವಾಸ ಇದ್ದುದರಿಂದಲೇ ಮುಂದೆ ಹನುಮಂತ ಸಾಗರವನ್ನೇ ಹಾರಿ ಶ್ರೀರಾಮನ ಭಂಟ ಎನಿಸಲು ಸಾಧ್ಯವಾಯಿತು. ಅಂಥದೇ ಮಹತ್ವಾಕಾಂಕ್ಷೆಯಿಂದ ವಿಜ್ಞಾನಿಗಳು ಸೂರ್ಯನತ್ತ ಕುತೂಹಲದ ನೋಟ ಹರಿಸಿದ್ದಾರೆ. ನೀವೂ ಕೂಡ ಆತ್ಮವಿಶ್ವಾಸ ಬೆಳೆಸಿಕೊಳ್ಳಿ. ದೊಡ್ಡ ಗುರಿ ಇಟ್ಟುಕೊಳ್ಳಿ. ಗಣರಾಜ್ಯೋತ್ಸವದ ಶುಭಾಶಯಗಳು.

–ಸಂಪಾದಕರು

## ಕುತೂಹಲ ಕೆರಳಿಸುವ ಸೂರ್ಯ



ತ್ರೇತಾಯುಗದಲ್ಲೇ, ಬಾಲ ಹನುಮ ಸೂರ್ಯನನ್ನು ಹಿಡಿಯಲು ಹಾರಿದ್ದ. ಈಗಲೂ ಸೂರ್ಯನನ್ನು ಮುಟ್ಟುವ ಪ್ರಯತ್ನ ಮುಂದುವರಿದಿದೆ. ಆ ನಿಟ್ಟಿನಲ್ಲಿ ವಿಜ್ಞಾನಿಗಳು ಏನೇನು ಮಾಡುತ್ತಿದ್ದಾರೆಂದು ತಿಳಿಯೋಣ ಬನ್ನಿ.

**ಸೂರ್ಯ ಪಥ ಬದಲಿಸುವ ಸಂಕ್ರಾಂತಿ ಹಬ್ಬ ಮೊನ್ನೆ ಆಯ್ತಲ್ಲ? ಆ ಸಂದರ್ಭಕ್ಕೆ ಇದು ವಿಶೇಷ ಲೇಖನ.**

ನಮ್ಮ ಭೂಮಿಗೆ ಅತ್ಯಂತ ಸಮೀಪದಲ್ಲಿರುವ ನಕ್ಷತ್ರ ಸೂರ್ಯ. ನಮ್ಮೆಲ್ಲರ ಅಸ್ತಿತ್ವವೇ ಸೂರ್ಯನನ್ನು ಅವಲಂಬಿಸಿದೆ. ನಾವು ಬಳಸುವ ನೀರು, ಆಹಾರ, ಬೆಳಕು ಎಲ್ಲದಕ್ಕೂ ಸೂರ್ಯನೇ ಮೂಲ. ಸೂರ್ಯನಿಲ್ಲದ ಬಾಳನ್ನು ಕಲ್ಪಿಸಿಕೊಳ್ಳುವುದೂ ಅಸಾಧ್ಯ. ಹೀಗಾಗಿಯೇ ನಮ್ಮ ಪೂರ್ವಿಕರು ಸೂರ್ಯನಿಗೆ ವಿಶೇಷ ಸ್ಥಾನ ಕೊಟ್ಟಿದ್ದರು. ಆಕಾಶಕಾಯಗಳಲ್ಲಿ ಮೊದಲ ಸ್ಥಾನ ಸೂರ್ಯನದೇ.

ಸೂರ್ಯನ ಬಗ್ಗೆ ಹೆಚ್ಚಿನ ಮಾಹಿತಿ ಕಲೆಹಾಕುವ ನಿಟ್ಟಿನಲ್ಲಿ ವಿಜ್ಞಾನಿಗಳು ಬಹಳ ಹಿಂದಿನಿಂದಲೇ ಕಾರ್ಯನಿರತರಾಗಿದ್ದಾರೆ. ಅಂತರಿಕ್ಷದ ಮೂಲೆ ಮೂಲೆಗಳಿಗೆ ಗಗನನೌಕೆಗಳನ್ನು ಕಳುಹಿಸಿರುವ ಅವರು ಸೂರ್ಯನನ್ನೂ ಸುಮ್ಮನೆ ಬಿಟ್ಟಿಲ್ಲ.

ನಮ್ಮ ಪರವಾಗಿ ಸೂರ್ಯನ ಮೇಲೊಂದು ಕಣ್ಣಿಟ್ಟಿರುವ ಗಗನನೌಕೆಗಳಲ್ಲಿ ಸೋಲಾರ್ ಆಂಡ್ ಹೀಲಿಯೋಸ್ಫೆರಿಕ್ ಅಬ್ಸರ್ವೇಟರಿ ಅಥವಾ ಸೋಹೋ ಪ್ರಮುಖವಾದದ್ದು. ಭೂಮಿಯಿಂದ ಹದಿನೈದು ಲಕ್ಷ ಕಿಲೋಮೀಟರುಗಳ ದೂರದಲ್ಲಿರುವ ಈ ಗಗನನೌಕೆ ಭೂಮಿಯ ಜತೆ ಜತೆಗೇ ಸೂರ್ಯನನ್ನು ಸುತ್ತುಹಾಕುತ್ತಿದೆ. ಸುಮಾರು ನೂರು ಕೋಟಿ ಯೂರೋ ವೆಚ್ಚದ ಸೋಹೋ, ಸೂರ್ಯನ ಕುರಿತಾದ ಅಮೂಲ್ಯ ವೈಜ್ಞಾನಿಕ ಮಾಹಿತಿ ಹಾಗೂ ಅತ್ಯದ್ಭುತ ಚಿತ್ರಗಳನ್ನು ಕಳೆದ 15 ವರ್ಷಗಳಿಂದ ಸತತವಾಗಿ ಒದಗಿಸುತ್ತಿದೆ.

ಅಮೆರಿಕಾದ ನಾಸಾ ಸಂಸ್ಥೆ ಮಾನವರಹಿತ ಅಂತರಿಕ್ಷ ವಾಹನವೊಂದನ್ನು ಸೂರ್ಯನ ವಾತಾವರಣದೊಳಗೆ ನುಗ್ಗಿಸುವ ಮಹತ್ವಾಕಾಂಕ್ಷಿ ಯೋಜನೆ ಪ್ರಕಟಿಸಿದೆ. 'ಸೋಲಾರ್ ಪ್ರೋಬ್ ಪ್ಲಸ್' ಎಂಬ ಹೆಸರಿನ ಈ ಅಂತರಿಕ್ಷವಾಹನವನ್ನು 2018ರ ವೇಳೆಗೆ ಉಡಾಯಿಸುವ ಆಲೋಚನೆ ನಾಸಾದ್ದು. ಸೂರ್ಯನ ಹೊರ ವಾತಾವರಣಕ್ಕೆ ಕರೋನಾ ಎಂದು ಹೆಸರು. ಇದು ನಮಗೆ ಕಾಣುವ ಸೂರ್ಯನ ಮೇಲ್ಮೈ(ಫೋಟೋಸ್ಫಿಯರ್)ಗಿಂತ ನೂರಾರು ಪಟ್ಟು ಹೆಚ್ಚು ಬಿಸಿಯಾಗಿರುತ್ತದೆ. ಈ ವೈಚಿತ್ರ್ಯಕ್ಕೆ ಕಾರಣ ಹುಡುಕುವುದು ಸೋಲಾರ್ ಪ್ರೋಬ್ ಪ್ಲಸ್‌ನ ಆಶಯಗಳಲ್ಲೊಂದು. ಜೊತೆಗೆ ಸೌರಮಾರುತಗಳ (ಸೋಲಾರ್ ವಿಂಡ್) ಬಗೆಗೂ ಹೆಚ್ಚಿನ ಮಾಹಿತಿ ಕಲೆಹಾಕುವ ಉದ್ದೇಶವಿದೆ. ಸೂರ್ಯನ ವಾತಾವರಣದಿಂದ ಹೊರಚಿಮ್ಮುವ ಇಲೆಕ್ಟ್ರಾನ್ ಹಾಗೂ ಪ್ರೋಟಾನುಗಳ ಈ ಧಾರೆ ನಮ್ಮ ಭೂಮಿಯ ಮೇಲೆ ಭೂಕಾಂತೀಯ ಮಾರುತಗಳು, ಅರೋರಾಗಳು ಮುಂತಾದ ಘಟನೆಗಳಿಗೆ ಕಾರಣವಾಗುತ್ತದೆ. ಧೂಮಕೇತುಗಳ ಬಾಲ ಸದಾ ಸೂರ್ಯನ ವಿರುದ್ಧ ದಿಕ್ಕಿಗೇ ತೋರುವುದಕ್ಕೂ ಸೌರಮಾರುತಗಳೇ ಕಾರಣ.

ಆದರೆ ಸೂರ್ಯನ ವಾತಾವರಣ ವಿಪರೀತ ಬಿಸಿಯಿರುತ್ತಲ್ಲ, ಈ ಅಂತರಿಕ್ಷವಾಹನ ಅದನ್ನು ಪ್ರವೇಶಿಸುವುದಾದರೂ ಹೇಗೆ ಎಂದು ನೀವು ಕೇಳಬಹುದು. ನಿಜ, ಸೂರ್ಯನ ವಾತಾವರಣ ತಲುಪುತ್ತಿದ್ದಂತೆಯೇ ಈ ವಾಹನ ಅಲ್ಲಿನ ಶಾಖ ತಾಳಲಾರದೆ ಸುಟ್ಟುಹೋಗುತ್ತದೆ. ಆದರೆ ಅಷ್ಟರೊಳಗಾಗಿಯೇ ಅದು ಅತ್ಯಂತ ಅಮೂಲ್ಯ ಮಾಹಿತಿಯನ್ನು ಸಂಗ್ರಹಿಸಿ ಕಳುಹಿಸಲಿದೆ.

ಅಂದಹಾಗೆ ಸೋಲಾರ್ ಪ್ರೋಬ್ ಪ್ಲಸ್ ಒಂದೇ ಅಲ್ಲ, ನಾಸಾ ಹಾಗೂ ಯುರೋಪಿಯನ್ ಸ್ಪೇಸ್ ಏಜೆನ್ಸಿಗಳು ಜಂಟಿಯಾಗಿ ಸೋಲಾರ್ ಆರ್ಬಿಟರ್ ಎಂಬ ಯೋಜನೆ ರೂಪಿಸುತ್ತಿವೆ. ಈ ದಶಕದ ಕೊನೆಯ ವೇಳೆಗೆ ಸೂರ್ಯನತ್ತ ಒಂದು ಉಪಗ್ರಹವನ್ನು ಕಳುಹಿಸುವ ಉದ್ದೇಶ ಈ ಯೋಜನೆಯದು. ●

## ಪಾರ್ಥೇನಿಯಂಗೊಂದು ಪರಿಹಾರ



ಪಾರ್ಥೇನಿಯಂ ಎಂಬುದು ಒಂದು ಕಳೆ ಗಿಡ. ಅದು ನಮ್ಮ ಬೆಳೆಗಳಿಗೆ ಹಾನಿಕಾರಕ. ಮೇಯುವ ಪ್ರಾಣಿಗಳಿಗೂ ಅದರಿಂದ ತೊಂದರೆ. ಈ ಕಳೆ ಗಿಡವು ಮೊಟ್ಟಮೊದಲು 1956ನೇ ಇಸವಿಯಲ್ಲಿ ಪುಣೆಯಲ್ಲಿ ಕಂಡು ಬಂತು. ಕ್ರಮೇಣ ದೇಶದ ಎಲ್ಲೆಡೆ ಹಬ್ಬಿತು. ಈ ಆತಂಕಕಾರಿ ಗಿಡವು ಅಮೇರಿಕದಿಂದ ಆಮದು ಮಾಡಿಕೊಂಡ ಆಹಾರ ಧಾನ್ಯಗಳೊಡನೆ ಬೆರೆತು ನಮ್ಮ ದೇಶಕ್ಕೆ ಬಂತು ಎಂದು ಭಾವಿಸಲಾಗಿದೆ. ಈ ಗಿಡಗಳ ನಿರ್ಮೂಲನೆ ಅಸಾಧ್ಯವೆಂದೇ ಅಂದುಕೊಳ್ಳಲಾಗಿತ್ತು. ಆದರೆ ಈಗ ನಮ್ಮ ರಾಜ್ಯದ ಕೃಷಿ ವಿಶ್ವವಿದ್ಯಾಲಯಗಳು ಇದಕ್ಕೊಂದು ಪರಿಹಾರ ಕಂಡು ಹಿಡಿದಿದ್ದಾರೆ. ಅದೇನೆಂದರೆ ಈ ಪಾರ್ಥೇನಿಯಂ ಕಳೆ ಗಿಡಗಳಿಗೆ ಶತ್ರುಗಿಡಗಳನ್ನು ಹೊಲ, ತೋಟದಲ್ಲಿ ಬೆಳೆಸುವುದು. ಈ ಗಿಡಗಳು ಪಾರ್ಥೇನಿಯಂ ಬೆಳೆಯದಂತೆ ತಡೆಗಟ್ಟುತ್ತವೆ. ಅಂಥ ಗಿಡಗಳ ಪಟ್ಟಿ ಕೆಳಗಿದೆ.

ಮಧ್ಯಾಹ್ನ ಮಲ್ಲಿಗೆ ಗಿಡ/ಸಂಜೆ ಮಲ್ಲಿಗೆ ಗಿಡ, ಕಾಡು ತುಳಸಿ, ತಗಚೆಗಿಡ, ಅಡವಿ ನೀಲಿ ಗಿಡ, ಆವರಿಕೆ ಸೊಪ್ಪು, ಔಡಲಗಿಡಗಳು, ಬೇಲಿಯಲ್ಲಿ ಹರಡುವ ನೀಲಿ ಹೂಬಿಡುವ ಸಸ್ಯ (ಉಚ್ಚೆ ಹೂ), ಸೀಮೆ ಎಣ್ಣೆ ಗಿಡ (ಅಲ್ಪ ಭೇದಿ ಗಿಡ), ಲಾಂಟಾನಾ ಪೊದೆಗಳು ಮುಂತಾದವು. ಇದಲ್ಲದೆ, ಮೆಕ್ಸಿಕನ್ ದುಂಬಿ ಕೀಟಗಳಿಂದಲೂ ಪಾರ್ಥೇನಿಯಂ ಕಳೆ ನಾಶ ಮಾಡಬಹುದು. ಇವು ಪಾರ್ಥೇನಿಯಂ ಗಿಡದ ಎಲೆ, ಹೂ, ಕಾಂಡಗಳನ್ನು ತಿಂದು ಈ ಕಳೆಗಿಡಗಳು ಬೆಳೆಯದಂತೆ ತಡೆಯುತ್ತವೆ.

ಜನವರಿ 12 ಸ್ವಾಮಿ ವಿವೇಕಾನಂದರ 148ನೇ ಜನ್ಮದಿನ. ಜನವರಿ 26 ಗಣರಾಜ್ಯೋತ್ಸವ. ಈ ಹಿನ್ನೆಲೆಯಲ್ಲಿ ವೀರ ಸನ್ಯಾಸಿ ವಿವೇಕಾನಂದರು ಹಾಗೂ ಸಂವಿಧಾನ ಶಿಲ್ಪಿ ಅಂಬೇಡ್ಕರರನ್ನು ಅವರ ಒಂದೊಂದು ನುಡಿಮುತ್ತಿನೊಂದಿಗೆ ನೆನೆಯೋಣ.



ಗಿಡಗಳಿಗೆ ನೀರೆರೆದು ಬೆಳೆಸುವಂತೆ ಆಲೋಚನೆಗಳನ್ನೂ ಪೋಷಿಸಿ ಬೆಳೆಸಬೇಕು. ಇಲ್ಲದಿದ್ದರೆ ಎರಡೂ ಮುದುಡಿ, ಕೊನೆಗೆ ಸಾಯುತ್ತವೆ.

~ ಬಿ ಆರ್ ಅಂಬೇಡ್ಕರ್



ಮನಸ್ಸಿಗೆ ಅಸಾಧ್ಯವಾದುದು ಯಾವುದೂ ಇಲ್ಲ. ನಮ್ಮನ್ನು ಅಥವಾ ಇತರರನ್ನು ದುರ್ಬಲರು ಎಂದು ಭಾವಿಸುವುದಕ್ಕಿಂತ ದೊಡ್ಡ ಪಾಪ ಇಲ್ಲ

~ಸ್ವಾಮಿ ವಿವೇಕಾನಂದ

## ಆ ಬುಟ್ಟಿ ಯಾವುದು?

ಇಲ್ಲಿ ತಲಾ ಹತ್ತು ಸೇಬುಗಳಿರುವ ಐದು ಬುಟ್ಟಿಗಳಿವೆ. ಅವುಗಳಲ್ಲಿ ನಾಲ್ಕು ಬುಟ್ಟಿಗಳಲ್ಲಿನ ಎಲ್ಲಾ ಹಣ್ಣುಗಳು ತಲಾ 100 ಗ್ರಾಂ ತೂಕದವು. ಯಾವುದೋ ಒಂದು ಬುಟ್ಟಿಯಲ್ಲಿರುವ ಸೇಬುಗಳು ಮಾತ್ರ ತಲಾ 110 ಗ್ರಾಂ ತೂಕದವು. ನಿಮ್ಮ ಬಳಿ ಒಂದು ತಕ್ಕಡಿ ಮತ್ತು ಒಂದು ಖಾಲಿ ಬುಟ್ಟಿ ಇದೆ. ಒಮ್ಮೆ ಮಾತ್ರ ತೂಕ ಮಾಡಲು ನಿಮಗೆ ಅವಕಾಶ. ಯಾವ ಬುಟ್ಟಿಯಲ್ಲಿ 110 ಗ್ರಾಂ ತೂಕದ ಸೇಬುಗಳಿವೆಯೆಂದು ಕಂಡುಹಿಡಿಯಿರಿ ನೋಡೋಣ?



ಉತ್ತರ ಹೊಳೆಯದಿದ್ದರೆ ಮುಂದಿನ ಸಂಚಿಕೆಯ ವರೆಗೂ ಕಾಯಬೇಕು.




## ಸವಿಗನ್ನಡ

ಮಕ್ಕಳೇ, ಭಾಷೆಯಲ್ಲಿ ಪ್ರತಿಯೊಂದು ಅಕ್ಷರಕ್ಕೂ ಬೆಲೆಯಿದೆ. ಒಂದಕ್ಷರದ ವ್ಯತ್ಯಾಸ ದೊಡ್ಡ ಪ್ರಮಾದಕ್ಕೇ ಕಾರಣವಾಗಬಹುದು. ಮೇಲಿನ ಚಿತ್ರದಲ್ಲಾಗಿರುವ ಅನರ್ಥವನ್ನು ಗಮನಿಸಿದಿರಾ? ನಿಮ್ಮ ಸುತ್ತಲಿನವರು ಇಂಥ ತಪ್ಪು ಪದ ಪ್ರಯೋಗ ಮಾಡಿದಾಗ ಅವರಿಗೆ ತಿಳಿಹೇಳಿ.

**ಕೃತಜ್ಞತೆ:** ಋಣಿಯಾಗಿರು, ಕೃತಜ್ಞನಾಗಿರು.

**ಕೃತಘ್ನತೆ:** ಉಪಕಾರ ಸ್ಮರಣೆ ಮಾಡದೇ ಇರುವುದು.

ಮೇಲಿನಂತೆ ಸಣ್ಣ ಭಾಷಾ ವ್ಯತ್ಯಾಸಗಳಿಂದಾಗುವ ಪ್ರಮಾದಗಳು ಗೊತ್ತಿದ್ದರೆ ನಮಗೆ ಬರೆದು ಕಳಿಸಿರಿ. ಚೆಂದದ ಬರಹಕ್ಕೆ ಬಹುಮಾನವಿದೆ. ವಿಳಾಸ ಕೆಳಗಿದೆ.

ಅದಮ್ಯ ಚೇತನ
'ಅನ್ನಪೂರ್ಣ'
ಮಹಾನಗರಪಾಲಿಕೆ ಸಮುದಾಯ ಭವನ
ಗವಿಪುರ, ಬೆಂಗಳೂರು –19

## ಸಮಾಚಾರ

### ನುಡಿಜಾತ್ರೆಗೆ ಕನ್ನಡ ತೇರು

77ನೇ ಅಖಿಲ ಭಾರತ ಸಾಹಿತ್ಯ ಸಮ್ಮೇಳನ ಫೆಬ್ರವರಿ 4, 5 ಮತ್ತು 6, 2011ರಂದು ಬೆಂಗಳೂರಿನಲ್ಲಿ ನಡೆಯಲಿದೆ. ಖ್ಯಾತ ನಿಘಂಟು ತಜ್ಞ ಪ್ರೊ. ಜಿ. ವೆಂಕಟಸುಬ್ಬಯ್ಯ ಈ ಸಮ್ಮೇಳನದ ಅಧ್ಯಕ್ಷರಾಗಿರುತ್ತಾರೆ. ಅಖಿಲ ಭಾರತ ಸಾಹಿತ್ಯ ಸಮ್ಮೇಳನಕ್ಕೆ ಪೂರಕವಾಗಿ ಹಾಗೂ ಮುಂಬರುವ ವಿಶ್ವ ಕನ್ನಡ ಸಾಹಿತ್ಯ ಸಮ್ಮೇಳನದ ಅಂಗವಾಗಿ ಕನ್ನಡ ನುಡಿ ತೇರು ಜಾಗೃತಿ ಜಾಥಾ ನಡೆಯಲಿದೆ. ಈ ತೇರನ್ನು ರಾಷ್ಟ್ರಕವಿ ಡಾ. ಜಿ.ಎಸ್.ಶಿವರುದ್ರಪ್ಪ, ಪ್ರೊ. ಜಿ. ವೆಂಕಟಸುಬ್ಬಯ್ಯ ಮುನ್ನಡೆಸಲಿದ್ದಾರೆ. ನಲವತ್ತು ವರ್ಷಗಳ ನಂತರ ಬೆಂಗಳೂರಿನಲ್ಲಿ ಸಾಹಿತ್ಯ ಸಮ್ಮೇಳನ ನಡೆಯುತ್ತಿದೆ.

### ನೂರಾರು ತಲೆಬುರುಡೆ



ಧಾರವಾಡ ಜಿಲ್ಲೆಯ ಅಣ್ಣಿಗೇರಿ ಗ್ರಾಮದಲ್ಲಿ ಇತ್ತೀಚೆಗೆ, ನೀರಿನ ಕಾಲುವೆ ಕೆಲಸ ಮಾಡುವ ಸಂದರ್ಭದಲ್ಲಿ ಹೂಳೆತ್ತುವಾಗ ನೂರಾರು ತಲೆಬುರುಡೆಗಳು ಸಿಕ್ಕಿರುವುದು ಆಶ್ಚರ್ಯ ಮೂಡಿಸಿದೆ. ಸಾಲಾಗಿ ಸಿಕ್ಕಿರುವ ತಲೆಬುರುಡೆಗಳು ಇತಿಹಾಸದ ಯಾವ ವಿಷಯದ ಮೇಲೆ ಬೆಳಕು ಚೆಲ್ಲುತ್ತವೆ? ಈಗಾಗಲೇ ಇತಿಹಾಸಕಾರರು, ಪ್ರಾಚ್ಯ ಸಂಶೋಧಕರು ಈ ತಲೆಬುರುಡೆಗಳ ಕಾಲಮಾನವನ್ನು ಹುಡುಕುತ್ತಿದ್ದಾರೆ. "ಕಾರ್ಬನ್ ಡೇಟಿಂಗ್" ವಿಧಾನದಿಂದ ಇವು ಎಷ್ಟು ಹಳೆಯವು ಎಂದು ತಿಳಿಯಬಹುದು. ಹೆಚ್ಚಿನ ವಿವರಕ್ಕೆ ಉತ್ಖನನ ಆರಂಭಿಸಲು ಸರಕಾರ ಆದೇಶಿಸಿದೆ.

### ಭಲೇ–ಜೋಡಿ

ಇತ್ತೀಚೆಗೆ ಲಕ್ನೊ ವಿಶ್ವವಿದ್ಯಾಲಯ ವಿದ್ಯಾರ್ಥಿನಿಯೊಬ್ಬಳಿಗೆ ಬಿ.ಎಸ್.ಸಿ. ಪದವಿ ವ್ಯಾಸಂಗ ಮಾಡಲು ಅನುಮತಿ ನೀಡಿತು. ಆದರಲ್ಲೇನು ವಿಶೇಷ? ಅದು ಅನುಮತಿ ನೀಡಿರುವುದು 10 ವರ್ಷ ವಯಸ್ಸಿನ ಸುಶ್ಮಾಳಿಗೆ! ಸುಶ್ಮಾ ಎಂಬ ಬಾಲ ಪ್ರತಿಭೆ ವಿಜ್ಞಾನದಲ್ಲಿ ಆಸಕ್ತಿ ಹೊಂದಿದ್ದು, 10ನೇ ವರ್ಷಕ್ಕೆ ಪಿ.ಯು.ಸಿ. ಪರೀಕ್ಷೆ ಪಾಸು ಮಾಡಿರುವ ಅವಳು ವಿಜ್ಞಾನ ಪದವಿ ವ್ಯಾಸಂಗಕ್ಕೆ ಅನುಮತಿ ಕೋರಿದ್ದಳು. ಅವಳ ಅಣ್ಣ ಶೈಲೇಂದ್ರ ಕೂಡ ತನ್ನ 14ನೇ ವಯಸ್ಸಿಗೆ ಲಕ್ನೊ ವಿಶ್ವವಿದ್ಯಾಲಯದ ಬಿ.ಸಿ.ಎ. ಪದವಿಗೆ ಪ್ರವೇಶ ಪಡೆದಿದ್ದ. ಈ ಜೋಡಿ ಪ್ರತಿಭೆಗಳ ಭವಿಷ್ಯ ಉಜ್ವಲವಾಗಲಿ.

### ವಾಯುಪಡೆಗೆ 'ತೇಜಸ್'

ದೇಶೀಯವಾಗಿ ತಯಾರಿಸಲಾದ ಲಘು ಯುದ್ಧವಿಮಾನ ತೇಜಸ್ ಅನ್ನು ಜನವರಿ 10ರಂದು ಭಾರತೀಯ ವಾಯುಪಡೆಗೆ ಸೇರ್ಪಡೆಗೊಳಿಸಲಾಯಿತು. ಇದನ್ನು ಏರೋನಾಟಿಕಲ್ ಡೆವಲಪ್‌ಮೆಂಟ್ ಏಜೆನ್ಸಿ ಅಭಿವೃದ್ಧಿಪಡಿಸಿದೆ. 1983ರಲ್ಲೇ ಆರಂಭವಾದ ಈ ಯೋಜನೆ ಈಗ ಸಾಕಾರಗೊಂಡಂತಾಗಿದೆ.

### ಶಬರಿಮಲೆಯಲ್ಲಿ ದುರಂತ

ಕೇರಳದ ಶಬರಿಮಲೆಯಲ್ಲಿ ಜನವರಿ 14ರಂದು ಸಂಭವಿಸಿದ ಕಾಲ್ತುಳಿತದಲ್ಲಿ 104 ಜನ ಸಾವಿಗೀಡಾಗಿದ್ದಾರೆ. ಸಂಕ್ರಾಂತಿಯ ಸಂದರ್ಭದಲ್ಲಿ ಮಕರ ಜ್ಯೋತಿ ವೀಕ್ಷಣೆಗೆಂದು ಸಾವಿರಾರು ಭಕ್ತರು ಒಂದೆಡೆ ಸೇರಿದ್ದ ಸಂದರ್ಭ ಈ ಅವಘಡ ನಡೆಯಿತು. ಸಾವಿಗೀಡಾದವರಲ್ಲಿ ಕರ್ನಾಟಕದಿಂದ ತೆರಳಿದ್ದ 24 ಮಂದಿಯೂ ಸೇರಿದ್ದಾರೆ. ಶಬರಿಮಲೆ ದೇವಾಲಯಕ್ಕೆ ಪ್ರತಿವರ್ಷ 4 ಕೋಟಿ ಯಾತ್ರಿಗಳು ಭೇಟಿ ನೀಡುತ್ತಾರೆ.

ಸರ್ವ ಶಿಕ್ಷಣ ಅಭಿಯಾನ
ಎಲ್ಲರೂ ಕಲಿಯೋಣ–ಎಲ್ಲರೂ ಬೆಳೆಯೋಣ

ಅದಮ್ಯ ಚೇತನ
ಬೆಂಗಳೂರು

ಚಿಣ್ಣರ ಚೇತನ–ಶಾಲಾ ಮಕ್ಕಳ ಗೋಡೆ ಪತ್ರಿಕೆ. ಕರ್ನಾಟಕ ಸರ್ಕಾರ, ಸರ್ವಶಿಕ್ಷಣ ಅಭಿಯಾನ ಮತ್ತು ಅದಮ್ಯ ಚೇತನ ಸಂಸ್ಥೆ– ಇವರ ಸಹಭಾಗಿತ್ವದಲ್ಲಿ ಪ್ರಕಾಶಿಸಿದೆ.
© ಹಕ್ಕುಗಳನ್ನು ಕಾದಿರಿಸಲಾಗಿದೆ

ಸರ್ವ ಶಿಕ್ಷಣ ಅಭಿಯಾನ ಮಿಷನ್
ಬೆಂಗಳೂರು